**ಶ್ರದ್ಧಾ ಪುಂಡಿ**
**ಉದಯದ ಕೃಷ್ಣವಂಶಿ**
**‘ವಂಶಿಕಾ’**

■ ರಾಘವೇಂದ್ರ ಕೆ.

# ‘ರೀಲ್ಸ್‌ನಿಂದ ನಾಯಕಿಯಾದ ಕಥೆ



◆ **ನಟನೆಯ ನಂಟು ಬೆಳೆದಿದ್ದು ಹೇಗೆ?**

ಚಿಕ್ಕವಯಸ್ಸಿನಲ್ಲೇ ಡಾನ್ಸ್ ಮೇಲೆ ಪ್ರೀತಿ ಬೆಳೆಯಿತು. ಕಾಕತಾಳೀಯ ಅಂದರೆ, ಮೂರು ವರ್ಷ ತುಂಬುವಷ್ಟರಲ್ಲಿ ಡಾನ್ಸ್ ಕಲಿಕೆಯನ್ನು ಶುರುಮಾಡಿದೆ. ಕ್ರಮೇಣ ಮಾಡೆಲಿಂಗ್ ಕೂಡ ಮಾಡುತ್ತಿದ್ದೆ. ಅಮ್ಮ ರಂಗಭೂಮಿಯ ಹವ್ಯಾಸಿ ಕಲಾವಿದೆ. ಇದೆಲ್ಲ ಸೇರಿ ಅಭಿನಯದ ಆಕರ್ಷಣೆಗೆ ಕಾರಣ ಆಗಿರಬಹುದು. ಅಷ್ಟರಲ್ಲಾಗಲೇ ನಟನೆಗೆ ಅವಕಾಶಗಳೂ ಸಿಕ್ಕವು. ಆದರೆ, ಮನೆಯಲ್ಲಿ ಅದಕ್ಕೆ ಅನುಮತಿಯನ್ನು ನೀಡಲಿಲ್ಲ. ಚಿಕ್ಕವಯಸ್ಸಿನಲ್ಲಿಯೇ ಆ ಜವಾಬ್ದಾರಿಗಳು ಬೇಡ. ಓದುವುದಕ್ಕೆ ಆದ್ಯತೆ ಇರಲಿ ಎಂದರು. ಎಂಜಿನಿಯರಿಂಗ್ ಸೇರಿದ ನಂತರ ಈ ಅವಕಾಶ ಸಿಕ್ಕಿತು. ಪ್ರಯತ್ನ ಮಾಡೋಣ ಎನ್ನುವ ಮನಃಸ್ಥಿತಿಯಲ್ಲೇ ಆಡಿಷನ್ ನೀಡಿದೆ. ಲುಕ್ ಟೆಸ್ಟ್ ನಂತರ ಈ ಪಾತ್ರಕ್ಕೆ ಅವಕಾಶ ಸಿಕ್ಕಿತು. ಪೋಷಕರೂ ಪ್ರೋತ್ಸಾಹಿಸಿದರು.

◆ **ವಂಶಿಕಾ ಪಾತ್ರ ಹೇಗಿದೆ?**

ವಂಶಿಕಾಳನ್ನು ಎಲ್ಲರೂ ಪ್ರೀತಿಯಿಂದ ವಂಶಿ ಎಂದೇ ಕರೆಯುತ್ತಾರೆ. ನನ್ನ ವ್ಯಕ್ತಿತ್ವಕ್ಕೆ ಸಾಕಷ್ಟು ಹೋಲಿಕೆ ಆಗುವಂತೆ ಆ ಪಾತ್ರ ಇದೆ. ಆಕೆಗೆ ಕೂಡು ಕುಟುಂಬದ ಬಗ್ಗೆ ಒಲವು ಇದೆ. ನನಗೂ ಅದೇ ಇಷ್ಟ. ವಂಶಿ ಅಪ್ಪನಿಗೂ ಮನೆ ಅಳಿಯನನ್ನೇ ಆಯ್ಕೆ ಮಾಡಬೇಕು ಎನ್ನುವ ಬಯಕೆ ಇದೆ. ಅಂತಹ ಅಪೇಕ್ಷೆ ನನ್ನ ಮನಸ್ಸಿನಲ್ಲಿಯೂ ಎಲ್ಲೋ ಇದೆ. ಶ್ರದ್ಧಾ ಅಮ್ಮ ಆರ್ಥಿಕವಾಗಿ ತಮ್ಮ ಮಗಳು ಸ್ವತಂತ್ರವಾಗಿ ಇರಬೇಕು. ಆಮೇಲೆ ಮದುವೆ ಎನ್ನುವಂತೆ ಇದೆ. ಹಾಗೆಯೇ ಪಾತ್ರದಲ್ಲಿರುವಂತೆಯೇ ತುಂಟತನ ನನ್ನಲ್ಲೂ ಇದೆ.

◆ **ರೀಲ್ಸ್ ತಯಾರಿಸಲು ಸಿದ್ಧತೆ ಹೇಗಿತ್ತು?**

ಸಾಮಾನ್ಯವಾಗಿ ಟ್ರೆಂಡಿಂಗ್ ಇರುವ ಸಂಗತಿಯನ್ನು ಆಯ್ಕೆ ಮಾಡಿಕೊಳ್ಳುತ್ತಿರಲಿಲ್ಲ. ವೈರಲ್ ಆದಂತಹ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುತ್ತಿರಲಿಲ್ಲ. ಯಾವುದೇ ವಸ್ತು ಆಯ್ಕೆ ಮಾಡಿಕೊಂಡರೂ ನಿರೂಪಣೆ ಮಾಡಲು ಖುಷಿ ಅನ್ನಿಸುವಂತಿರಬೇಕಿತ್ತು. ಅದನ್ನು ನೋಡಿದವರೂ ಅಷ್ಟೇ ಖುಷಿಯಿಂದ ನೋಡಬೇಕು ಎನ್ನುವ ಆಸೆ ಇತ್ತು. ಯಾವತ್ತೂ ಕೆಟ್ಟ ಅಥವಾ ತಪ್ಪು ಸಂದೇಶ ನೀಡುವಂತೆ ಇರಕೂಡದು ಎನ್ನುವುದು ಮುಖ್ಯ ಆಗುತ್ತಿತ್ತು. ನನ್ನ ರೀಲ್ಸ್ ಪರಿಣಾಮವೂ ಈ ಪಾತ್ರ ಸಿಗಲು ನೆರವಾಗಿದೆ ಎಂದು ಅನ್ನಿಸುತ್ತದೆ. ಸಾಮಾನ್ಯವಾಗಿ ನನ್ನ ತಾಯಿ ರೀಲ್ಸ್ ವಿಷಯದ ಮೇಲೆ ನಿಗಾ ಇಟ್ಟಿದ್ದರು. ಯಾವತ್ತೂ ಒಳ್ಳೆಯ ಸಂಗತಿಯನ್ನೇ ಮಾಡಲು ಪ್ರೇರಣೆ ನೀಡುತ್ತಿದ್ದರು. ರೀಲ್ಸ್ ಡಾನ್ಸ್‌ಗೆ ಆಯ್ಕೆ ಮಾಡುವ ಸಂಗೀತವೂ ಸದಭಿರುಚಿಯಿಂದ ಕೂಡಿರಬೇಕಿತ್ತು. ಈ ವಿಷಯದಲ್ಲಿ ಅಮ್ಮನ ಸೂಚನೆಯನ್ನು ಪಾಲಿಸುತ್ತಿದ್ದೆ. ಮುಖದಲ್ಲಿ ಭಾವಾಭಿವ್ಯಕ್ತಿಗೆ ಹೆಚ್ಚು ಅವಕಾಶ ಇರುವಂತಹ ಹಾಡನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದೆ.

ಕೋವಿಡ್ ಕಾಲದಲ್ಲಿ ರೀಲ್ಸ್ ಮಾಡುವ ಆಸಕ್ತಿ ಹುಟ್ಟಿತು. ಆಗ ಹೆಚ್ಚು ಬಿಡುವಿನ ಸಮಯ ಇತ್ತು. ನಟನೆ ಇಷ್ಟ ಇದ್ದರೂ ಓದಿನ ಆದ್ಯತೆಗಾಗಿ ಸ್ವಯಂ ನಿಯಂತ್ರಣ ಹಾಕಿಕೊಂಡಿದ್ದೆ. ಅಭಿನಯಿಸಬೇಕು ಎನ್ನುವ ಉತ್ಕಟ ಅಪೇಕ್ಷೆ ರೀಲ್ಸ್ ಮಾಡಲು ಮತ್ತೊಂದು ರೀತಿಯಲ್ಲಿ ಪ್ರೇರಣೆ ನೀಡಿರಬಹುದು. ಯಾವತ್ತೂ ಟ್ರೆಂಡ್ ಅಥವಾ ಜನಪ್ರಿಯ ಮಾದರಿಯನ್ನು ಅನುಸರಿಸಲಿಲ್ಲ. ನನ್ನದೇ ಆದ ಕಟ್ಟಳೆಯನ್ನು ಹಾಕಿಕೊಂಡು ಖುಷಿಕೊಡುವಂತಹ ವಿಷಯವನ್ನು ನಿರ್ವಹಣೆ ಮಾಡಿದೆ.

◆ **ಮೊದಲ ದಿನ ಬಣ್ಣ ಹಚ್ಚಿದ ಸಂದರ್ಭ ಹೇಗಿತ್ತು?**

ನಟಿ ಆಗಬೇಕು ಎನ್ನುವುದಕ್ಕಿಂತ ಕಲಾವಿದೆಯಾಗಬೇಕು ಎನ್ನುವುದು ನನ್ನಾಸೆ. ವಂಶಿಯಾಗಿ ಪರಕಾಯ ಪ್ರವೇಶ ಮಾಡಬೇಕು ಎನ್ನುವುದರಿಂದ ಆರಂಭವಾಯಿತು. ಮೊದಲ ದಿನ ಚಿತ್ರೀಕರಣದ ಜನದಟ್ಟಣೆಯ ನಡುವೆ ವಂಶಿ ಆಗುವುದು ಸ್ವಲ್ಪ ಕಷ್ಟ ಆಯಿತು. ಮಾಡಲು ಬರಲ್ಲ ಎನ್ನುವುದು ಅದಕ್ಕೆ ಕಾರಣ ಆಗಿರಲಿಲ್ಲ. ಜನರ ನಡುವೆ ಮತ್ತೊಂದು ಪಾತ್ರವಾಗಲು ಅಳುಕು ಅನ್ನಿಸಿತ್ತು. ತಂಡದಲ್ಲಿದ್ದ ಅನುಭವಿಗಳ ಬೆಂಬಲದಿಂದ ಆ ಮಿತಿಯೂ ದಾಟಿ ನಟನೆಯನ್ನು ಸುಲಭ ಮಾಡಿಕೊಂಡಿದ್ದೇನೆ.

◆ **ಕೃಷ್ಣ ಮತ್ತು ವಂಶಿ ಪಾತ್ರಗಳು ವಿರುದ್ಧ ಗುಣದವರು. ಪಾತ್ರ ನಿರ್ವಹಣೆಗೆ ಅದು ಎಷ್ಟರಮಟ್ಟಿಗೆ ಸಹಕಾರಿ ಆಗುತ್ತಿದೆ?**

ಅದೇ ಆಕರ್ಷಣೆಗೆ ಕಾರಣ ಇರಬಹುದು. ಕೃಷ್ಣ ಪಾತ್ರಕ್ಕೆ ಸ್ವಲ್ಪ ಸಂಕೋಚ ಇದೆ. ಹಾಗೆಂದು ಕ್ಯಾಮೆರಾದ ಆಚೆ ಅವರೇನು ನಾಚಿಕೆ ಸ್ವಭಾವದವರಲ್ಲ. ನಾನು ಬೋಲ್ಡ್ ಇರುವುದರಿಂದ ಎಲ್ಲ ಸಹಜ ಎಂದೆನಿಸುತ್ತದೆ. ಒಟ್ಟಾರೆ ಎರಡೂ ಪಾತ್ರಗಳು ತುಂಬ ಚೆನ್ನಾಗಿವೆ. ವಂಶಿಯಾಗಿ ತರ್ಲೆ ಮಾಡಲು ಚೆನ್ನಾಗಿರುತ್ತದೆ. ಅಭಿನಯ ಕ್ಷೇತ್ರದ ಆರಂಭದ ಹಂತದಲ್ಲಿ ಇದ್ದೇನೆ. ಇದುವರೆಗಿನ ಪಯಣವನ್ನು ನೆನಪಿಸಿಕೊಂಡರೆ, ಒಳ್ಳೆಯ ವೇದಿಕೆ ಸಿಕ್ಕಿದೆ ಎಂದು ಅನ್ನಿಸುತ್ತದೆ. ■